ಆ) ತೀವ್ರ ಸಮುದ್ರ ಕೊರತೆ ಸಮಸ್ಯೆ ಇರುವ ಮಂಗಳೂರಿನ ಉಳ್ಳಾಲದಲ್ಲಿ ಈ ತಂತ್ರಜ್ಞಾನವನ್ನು ಪ್ರಾಯೋಗಿಕವಾಗಿ ಅಳವಡಿಸಲು ಯೋಜಿಸಿದೆ. ಇದರ ವೈಶಿಷ್ಟ ಬೀಚನ್ನು ಕೊರೆತದಿಂದ ತಪ್ಪಿಸುವುದಲ್ಲದೆ ನೈಸರ್ಗಿಕ ಮರಳು ಮರು ಶೇಖರಣೆಯಾಗಿ ಬೀಚನ್ನು ವೃದ್ಧಿಯಾಗುವಂತೆ ಮಾಡುತ್ತದೆ.

ಮಂಗಳೂರಿನಲ್ಲಿ ಹಾಸ್ಟೆಲು ವಸತಿ ಸೌಲಭ್ಯ ಒದಗಿಸುವುದು

4207 (4767) : ಶ್ರೀ ಯೋಗೇಶ್ ಭಟ್ ಎನ್. (ಮಂಗಳೂರು) ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ದಕ್ಷಿಣ ಕನ್ನಡ ಜಿಲ್ಲೆಯ ಕೇಂದ್ರವಾದ ಮಂಗಳೂರಿನಲ್ಲಿ 2003–04ರ ಸಾಲಿನಲ್ಲಿ ವಿದ್ಯಾಭ್ಯಾಸ ಮುಂದುವರೆಸಲು ಹಾಗೂ ಹಾಸ್ಟೆಲುನಲ್ಲಿ ವಸತಿ ಸೌಲಭ್ಯ ಪಡೆಯಲು ಬಂದಿರುವ ಪರಿಶಿಷ್ಟ ವರ್ಗಗಳ/ಪರಿಶಿಷ್ಟ ಜಾತಿಗಳ, ಹಿಂದುಳಿದ ವರ್ಗಗಳ, ಅಲ್ಪಸಂಖ್ಯಾತ ವಿದ್ಯಾರ್ಥಿಗಳ ಅರ್ಜಿ ಎಷ್ಟು; ಈ ಹಾಸ್ಟೆಲ್‌ನಲ್ಲಿ ಎಷ್ಟು ಜನರಿಗೆ ವಸತಿ ಸೌಲಭ್ಯ ಕೊಡಲಾಗಿದೆ;

ಆ) ಮಂಗಳೂರಿನ ಉರ್ವಾ ಬೆಲಸೆ ಪೇಟೆಯ ಪರಿಶಿಷ್ಟ ವಿದ್ಯಾರ್ಥಿ ಹಾಸ್ಟೆಲ್‌ನ ಸ್ಥಿತಿಗತಿ ಏನು; ನಿರ್ವಹಣೆಗೆ ತಗುಲಿರುವ ಖರ್ಚು ಎಷ್ಟು?

ಶ್ರೀ ಎ. ಕೃಷ್ಣಪ್ಪ (ಸಮಾಜ ಕಲ್ಯಾಣ ಸಚಿವರು)

ಅ) ಸ್ವೀಕರಿಸಿದ ಅರ್ಜಿಗಳ ಸಂಖ್ಯೆ ಈ ಕೆಳಕಂಡಂತಿದೆ :–

ಇಲಾಖೆ	ಅರ್ಜಿಗಳ ಸಂಖ್ಯೆ	ಪ್ರವೇಶ ಪಡೆದ ವಿದ್ಯಾರ್ಥಿಗಳ ಸಂಖ್ಯೆ
ಸಮಾಜ ಕಲ್ಯಾಣ ಇಲಾಖೆ	247	158
ಹಿಂದುಳಿದ ವರ್ಗಗಳ ಇಲಾಖೆ	482	405
ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆ	50	50
ಅಲ್ಪಸಂಖ್ಯಾತರ ಇಲಾಖೆ	68	50

ಆ) ಉರ್ವಾವೆಲ್ಫ್ (ಬೋಲಾರ್) ಮಂಗಳೂರು ಇಲ್ಲಿನ ಎಸ್.ಸಿ./ಎಸ್.ಟಿ. ವಿದ್ಯಾರ್ಥಿನಿಲಯವು ಬಹಳ ಕಾಲದಿಂದ ಕಟ್ಟಲ್ಪಡುತ್ತಿದ್ದು, ದುಸ್ಥಿತಿಯಲ್ಲಿದೆ. ಈ ಅಪೂರ್ಣಗೊಂಡ ಕಟ್ಟಡವನ್ನು ಕೆಡವಿ ಒಂದು ಹೊಸ ಕಟ್ಟಡವನ್ನು ರೂ. 48.00 ಲಕ್ಷದ ಅಂದಾಜಿನಲ್ಲಿ ನಿರ್ಮಿಸಲು ಜಿಲ್ಲಾ ಪಂಚಾಯತ್ ನಿರ್ಣಯಿಸಿದೆ. ಸರ್ಕಾರದ ಆದೇಶ ಸಂಖ್ಯೆ ಸಕಇ 327 ವಕವಿ 2002 ದಿನಾಂಕ: 23–5–2002ರನ್ವಯ ಆಡಳಿತಾತ್ಮಕ ಅನುಮೋದನೆ ನೀಡಿ ರೂ. 24.00 ಲಕ್ಷಗಳನ್ನು ಸಹ ಮುಖ್ಯ ಕಾರ್ಯನಿರ್ವಾಹಣಾಧಿಕಾರಿ ಜಿಲ್ಲಾ ಪಂಚಾಯತ್ ದಕ್ಷಿಣ ಕನ್ನಡ ಜಿಲ್ಲೆ ಇವರಿಗೆ ಬಿಡುಗಡೆ ಮಾಡಿದೆ. ವಿದ್ಯಾರ್ಥಿನಿಲಯದ ನಿರ್ವಹಣೆಗೆ ಏನೂ ಹಣ ಖರ್ಚು ಮಾಡಿರುವುದಿಲ್ಲ.

ಸಣ್ಣ ಪ್ರಮಾಣದ ಕೈಗಾರಿಕೆಗಳಿಗೆ ಸಬ್ಸಿಡಿ

4208 (4788) : ಶ್ರೀ ಯೋಗೀಶ್ ಭಟ್ ಎನ್ (ಮಂಗಳೂರು) ಮಾನ್ಯ ಸಣ್ಣ ಪ್ರಮಾಣದ ಕೈಗಾರಿಕೆಗಳು ಹಾಗೂ ಹಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಸಣ್ಣ ಪ್ರಮಾಣದ ಕೈಗಾರಿಕೆಗಳು ಕಳೆದ 3 ವರ್ಷಗಳಲ್ಲಿ ಎಷ್ಟು ಮುಚ್ಚಿವೆ? ಈಗ ಒಟ್ಟಾರೆ ಎಷ್ಟು ಕೈಗಾರಿಕೆಗಳು ಕಾರ್ಯ ನಿರ್ವಹಿಸುತ್ತವೆ?

ಆ) ಅವುಗಳು ಎದುರಿಸುತ್ತಿರುವ ಸಮಸ್ಯೆಗಳೇನು;